ಪಿಡಬ್ಲ್ಯೂ 02

ಪ್ರಮಾಣ ವಚನ ಭೋದಿಸಿದ ದಿನಾಂಕಃ 02-09-2022.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

ಚಾ.ಸಾ 1 ಮತ್ತು ಚಾಸಾ-4 ರವರು ಜಂಟಿಯಾಗಿ ಹಿಸ್ಸೆ ಪಡೆದಿದ್ದಾರೆ ಎಂದರೆ ಹೌದು. ಈ ಕೇಸಿನ 1ನೇ ಆರೋಪಿ ಮತ್ತು ಅವರ ತಂದೆ ಭದ್ರೆಗೌಡ ರವರು ಜಂಟಿಯಿಾಗಿ ಹಿಸ್ಸೆ ಪಡೆದು ಒಂದು ರಿಜಿಸ್ಟರ್ ಪತ್ರ ಮಾಡಿಕೊಂಡರು ಎಂದರೆ ಹೌದು. ನಂತರ ಪ್ರಾ,ಸಾ-1 ರವರು 1ನೇ ಆರೋಪಿ ಮತ್ತು ಅವರ ತಂದೆ ಮೇಲೆ ಸಿವಿಲ್ ಪ್ರಕರಣ ದಾಖಲು ಮಾಡಿದ್ದರು ಎಂದರೆ ಇರಬಹುದು. 1ನೇ ಆರೋಪಿ ಮತ್ತು ಪ್ರಾ.ಸಾ-1 ರವರು ಸಾಕಷ್ಟು ಕ್ರಿಮಿನಲ್ ಪ್ರಕರಣ ದಾಖಲು ಮಾಡಿದ್ದು ಅದರಲ್ಲಿ ನಾನೂ ಆರೋಪಿಯಾಗಿದ್ದೇನೆ ಎಂದರೆ ಹೌದು. ಕೃತ್ಯ ನಡೆದ ಸ್ಥಳಕ್ಕೆ ನಾನು ಹೋದಾಗ ಸ್ಥಳದಲ್ಲಿ ನಾನಲ್ಲದೇ 1 ರಿಂದ 3ನೇ ಆರೋಪಿತರು , ಚಾಸಾ-4 ಬಿಟ್ಟರೆ ಇನ್ಯಾರೂ ಇರಲಿಲ್ಲ. ನಾನು ಸ್ಥಳಕ್ಕೆ ಹೋಗಲಿಲ್ಲ , ನಾನು ಹೋದಾಗ ಯಾವುದೇ ಕೃತ್ಯ ನಡೆಯಲಿಲ್ಲ ಅದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸರ್ಕಾರಿ ಆಸ್ಪತ್ರೆಗೆ ಹೋಗಲಿಲ್ಲ ಎಂದರೆ ಹೌದು. ಈ ಕೇಸಿನಲ್ಲಿ ಹೇಳಿಕೆ ಹೇಳಬೇಕು ಎಂದು ನನಗೆ ಯಾರೂ ಹೇಳಲಿಲ್ಲ. ನಾನು ಈ ಕೇಸಿನಲ್ಲಿ ನನ್ನ ಹೇಳಿಕೆಯನ್ನು ಪೊಲೀಸ್ ಠಾಣೆಯಲ್ಲಿ ಪೋಲೀಸರ ಮುಂದೆ ಹೇಳಿರುತ್ತೇನೆ. 2 ವರ್ಷದ ಹಿಂದೆ ಹೇಳಿಕೆಯನ್ನು ಕೊಟ್ಟಿರುತ್ತೇನೆ. ಪೋಲೀಸ್ ಠಾಣೆಗೆ ಪ್ರಾ.ಸಾ-1 ರವರು ನನ್ನನ್ನು ಕರೆದುಕೊಂಡು ಹೋಗಿದ್ದರು. ಚಾಸಾ-1 ಪುಟ್ಟಸ್ವಾಮಿಯವರು ಹೇಳಿದ ಪ್ರಕಾರ ನಾನು ಠಾಣೆಯಲ್ಲಿ ಹೇಳಿಕೆ ನೀಡಿರುತ್ತೇನೆ ಎಂದರೆ ಹೌದು.

ಪುಟ್ಟಸ್ವಾಮಿ ಹಿಸ್ಸೆಗೆ ಹೋದ ಜಾಗದಲ್ಲಿ ಒಂದು ಮನೆ ಇದ್ದು ಸದರಿ ಮನೆಯಲ್ಲಿ ಆರೋಪಿತರು ವಾಸವಾಗಿದ್ದರು ಆ ಬಗ್ಗೆ ಪ್ರಾ.ಸಾ-1 ರವರು ಪ್ರಕರಣ ದಾಖಲು ಮಾಡಿದ್ದಾರೆ ಎಂದರೆ ಹೌದು. ಒಪ್ಪಂದದ ಪ್ರಕಾರ ಪಿರ್ಯಾದುದಾರರು 15 ಸಾವಿರ ರೂ. ಕೊಡಬೇಕು ಆ ಮನೆಯನ್ನು ಆರೋಪಿಗಳೇ ಇಟ್ಟುಕೊಳ್ಳುವುದಾಗಿ ಒಪ್ಪಂದ ಆಗಿದೆ ಎಂದರೆ ಹೌದು. ಪೋಲೀಸರು ನನಗೆ ಹೇಳಿಕೆ ಕೊಡಲು ಯಾವುದೇ ನೋಟೀಸ್ ಕೊಟ್ಟಿಲ್ಲ. ನನ್ನ ಹೇಳಿಕೆಯನ್ನು ಪೋಲೀಸರು ಕಂಪ್ಯೂಟರ್ ನಲ್ಲಿ ಟೈಪ್ ಮಾಡಿಕೊಂಡಿರುತ್ತಾರೆ. ಟೈಪ್ ಮಾಡಿದಂತ ಪೋಲೀಸರ

ಹೆಸರು ನನಗೆ ಗೊತ್ತಿಲ್ಲ. ಮು ಮಾ -4 ನ್ನು ಪೋಲೀಸರಿಗೆ ಯಾರು ಕೊಟ್ಟರು ಎಂದು ನನಗೆ ಗೊತ್ತಿಲ್ಲ. ಜಾತ್ರೆಗಳಲ್ಲಿ ಮಕ್ಕಳು ಬಲೂನ್ ಹೊಡೆಯಲು ಮು ಮಾ -4 ನ್ನು ಬಳಸುತ್ತಾರೆ ಎಂದರೆ ಸರಿಯಲ್ಲ.

ಯಾವುದೇ ಘಟನೆ ನಡೆಯದಿದ್ದರೂ ಆರೋಪಿಗಳ ಮೇಲೆ ಇರುವ ದ್ವೇಷದಿಂದ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆಸ್ತಿ ಮತ್ತು ಮನೆ ಬಗ್ಗೆ ಪ್ರಾ.ಸಾ-1 ಮತ್ತು ಆರೋಪಿಗಳ ಮದ್ಯೆ ವಿವಾದ ಇರುವುದರಿಂದ ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).